Karnatak Law Society's

# Vishwanathrao Deshpande Institute of Technology

**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**

**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 07-02-2023

**ಪತ್ರಿಕಾ ಪ್ರಕಟಣೆ:**

## ಐ. ಎಸ್. ಟಿ. ಇ. ನವ ದೆಹಲಿಯ ಅಧ್ಯಕ್ಷರ ಬೇಟಿ

ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳಕ್ಕೆ ಇಂಡಿಯನ್ ಸೊಸೈಟಿ ಫಾರ್ ಟೆಕ್ನಿಕಲ್ ಎಜುಕೇಶನ್ (ಐ. ಎಸ್. ಟಿ. ಇ ) ನವ ದೆಹಲಿ ಯ ಅಧ್ಯಕ್ಷರಾದ ಡಾ.ಪಿ. ಕೆ. ದೇಸಾಯಿ ಹಾಗೂ ಐ. ಎಸ್ . ಟಿ. ಇ. ಮಹಾರಾಷ್ಟ್ರ ಮತ್ತು ಗೋವಾ ವಿಭಾಗದ ಚೇರ್ಮನ್ ರಾದ ಡಾ. ಆರ್. ಕೆ. ಸಾವಂತ್ ಅವರು ಫೆಬ್ರುವರಿ 7 ರಂದು ಭೇಟಿ ನೀಡಿದ್ದರು. ಮಹಾವಿದ್ಯಾಲಯದ ಐ. ಎಸ್. ಟಿ. ಇ. ವಿಭಾಗವು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಡಾ. ಪಿ. ಕೆ. ದೇಸಾಯಿ ಅವರು ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ಉದ್ದೇಶಿಸಿ ಮಾತನಾಡುತ್ತಾ " ಪ್ರಾಚೀನ ಭಾರತದ ಶಿಕ್ಷಣ ಪದ್ಧತಿಯನ್ನು ಶುಶ್ರುತ, ಕೌಟಿಲ್ಯ ಹಾಗೂ ಆರ್ಯಭಟರ ಉದಾಹರಣೆಯೊಂದಿಗೆ ವಿವರಿಸಿದರು. ಹೊಸ ಶಿಕ್ಷಣ ನೀತಿಯು ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನು ತರಲಿದೆ ಎಂದು ಹೇಳಿದರು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ನೀಡುತ್ತಿರುವ ಕೆ. ಎಲ್. ಎಸ್. ಸಂಸ್ಥೆಯ ಕಾರ್ಯವನ್ನು ಮುಕ್ತ ಕಂಠದಿಂದ ಶ್ಲಾಘಸಿದರು". ಗೌರವ ಅತಿಥಿಗಳಾಗಿ ಮಾತನಾಡಿದ ಡಾ. ಆರ್. ಕೆ. ಸಾವಂತ್ ಅವರು ಐ. ಎಸ್. ಟಿ. ಇ. ಯ ಕಾರ್ಯ ವೈಖರಿ ಮತ್ತು ಮಹತ್ವವನ್ನು ವಿವರಿಸಿದರು. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಐ. ಎಸ್. ಟಿ.ಇ. ಯ ಸದಸ್ಯತ್ವ ಹೊಂದಿ, ಪ್ರಯೋಜನ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿಯವರು ಸಭಿಕರನ್ನು ಸ್ವಾಗತಿಸುತ್ತಾ, ಡಾ. ಪಿ. ಕೆ. ದೇಸಾಯಿ ಮತ್ತು ಡಾ. ಆರ್. ಕೆ. ಸಾವಂತ್ ಅವರು ಮಹಾವಿದ್ಯಾಲಯಕ್ಕೆ ಆಗಮಿಸಿರುವುದು ಹರ್ಷ ತಂದಿದೆ ಎಂದು ಹೇಳಿದರು. ಮಹಾವಿದ್ಯಾಲಯದ ಐ. ಎಸ್. ಟಿ. ಇ. ಯ ಸಂಚಾಲಕರಾದ ಪ್ರೊ. ಕಾರ್ತಿಕ್ ಕುಲಕರ್ಣಿ ವಂದಿಸಿದರು. ಪ್ರೊ. ಲಕ್ಷ್ಮಿ ಹಟ್ಟಿ ಹೋಳಿ ನಿರೂಪಿಸಿದರು. ಪ್ರೊ. ಶ್ರೀ ಗೌರಿ ಅತಿಥಿ ಗಳ ಕಿರುಪರಿಚಯ ಮಾಡಿದರು.ಈ ಕಾರ್ಯಕ್ರಮದಲ್ಲಿ 100ಕ್ಕೂ ಅಧಿಕ ವಿದ್ಯಾರ್ಥಿಗಳು ಮತ್ತು ಮಹಾವಿದ್ಯಾಲಯದ ಎಲ್ಲಾ ಬೋಧಕ ಸಿಬ್ಬಂದಿಗಳು ಪಾಲ್ಗೊಂಡಿದ್ದರು .

ಪ್ರಾಂಶುಪಾಲರು

**Principal**
**KLS Vishwanathrao Deshpande Institute of Technology, Haliyal**


CIVIL ENGINEERING
ELECTRICAL & ELECTRONICS ENGINEERING
MECHANICAL ENGINEERING


KLS
KNOWLEDGE IS POWER
HALIYAL